ಮೂಲ ದಾವಾ ನಂಃ 11/2018

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **24.07.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ.ಎಸ್.ಜಿ ವಾದಿ ಪರ ವಕೀಲರಿಂದಃ**

ಈ ದಾವೆಯನ್ನು ನಮ್ಮ ತಂದೆಯವರು ದಾಖಲು ಮಾಡಿರುತ್ತಾರೆ. ಈ ದಾವೆಯ ಬಗ್ಗೆ ಮಾಹಿತಿ ಮತ್ತು ದಾಖಲಾತಿಯನ್ನು ನಮ್ಮ ತಂದೆಯವರೇ ಪೂರೈಸಿರುತ್ತಾರೆ. ಈ ದಾವೆಯಲ್ಲಿ ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದರೆ, ಜಿ.ಪಿ.ಎಸ್ ಪ್ರಮಾಣ ಪತ್ರ , ಅರಣ್ಯ ಹಕ್ಕು ಸಮೀತಿ ಹೊರಡಿಸಿದ ಠರಾವು , ಪಂಚಾಯತ್ ಪ್ರಮಾಣ ಪತ್ರ ನನಗೆ ಇಷ್ಟು ಮಾತ್ರ ನೆನಪಿದೆ ಎಂದು ನುಡಿಯುತ್ತಾರೆ. ಇವುಗಳನ್ನು ಹೊರತುಪಡಿಸಿ , ನಮ್ಮ ತಂದೆಯವರು ಬೇರೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ದಾವೆ ಆಸ್ತಿಗೆ ಸಂಬಂಧಿಸಿದಂತೆ 1975 ನೇ ಇಸ್ವಿಯಲ್ಲಿ ಆದ ವ್ಯಾಜ್ಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ದಾವೆ ಆಸ್ತಿಗೆ ಸಂಬಂಧಿಸಿದಂತೆ 2014 ನೇ ಇಸ್ವಿಯಲ್ಲಿ ಆದ ವ್ಯಾಜ್ಯದ ಬಗ್ಗೆಯು ಸಹ ನನಗೆ ಮಾಹಿತಿ ಇಲ್ಲ. ಅದನ್ನು ನಮ್ಮ ತಂದೆಯವರು ನೋಡಿಕೊಳ್ಳುತ್ತಿದ್ದರು. ನಾನು ಗ್ರಾಮ ನಕಾಶೆಯನ್ನು ನೋಡಿರುವುದಿಲ್ಲ. ಸಾಕ್ಷಿಗೆ ಗ್ರಾಮ ನಕಾಶೆಯನ್ನು ತೋರಿಸಿ ಕೇಳಲಾಗಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಅದನ್ನು ನೋಡಿದರೇ ಗೊತ್ತಾಗುತ್ತದೆ ಎಂದರೆ , ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

1975 ನೇ ಇಸ್ವಿಯಿಂದಲೂ ದಾವಾಸ್ತಿಯನ್ನು ರುದ್ರಯ್ಯರವರಿಂದ ಪಡೆದುಕೊಳ್ಳಬೇಕೆಂದು ಸುಳ್ಳು ವ್ಯಾಜ್ಯ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**